MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 ENGLISH DAILY Subscription Yearly - Rs. - SATURDAY 15-4-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಮಲೇಶಿಯನ್ ಪಾಮೆಣ್ಣೆ ದರ ಚೇತರಿಕೆ

ಹಿಂದಿನ ವಾರ ಕುಸಿತವಾಗಿದ್ದು ಮಲೇಶಿಯನ್ ಪಾಮೆಣ್ಣೆ ದರ ಇಂದು ಬೆಳಿಕಗ್ಗೆ ಚೇತರಿಕೆಯಾಗಿದ್ದು 1.18 ಶೇಕಡಾ ಹೆಚ್ಚಳ ಟನ್‌ಗೆ 3608 ರಿಂಗಿಟ್ಸ್ ($ 817.03) ಆಗಿದೆ. ಮಲೇಶಿಯಾ ಕಚ್ಚಾ ಪಾಮೆಣ್ಣೆಯ ರಫ್ತು ತೆರಿಗೆ 8 ಶೇಕಡಾದಲ್ಲಿರಿಸಿ, ರಫ್ತು ರೆಫರೆನ್ಸ್ ದರ ಹೆಚ್ಚಳಗೊಳಿಸಿದೆಯೆನ್ನಲಾಗಿದೆ.

## ಜೋಳ ಉತ್ಪಾದನೆ ಹೆಚ್ಚಳ ಬೇಡಿಕೆ ಇಳಿಕೆ

ರಾಬಿ ಬೆಳೆಯ ಜೋಳ ಕಟಾವು ಪ್ರಾರಂಭವಾಗಿದ್ದು ಉತ್ಪಾದನೆ ಹೆಚ್ಚಳವಿದ್ದು ಬೇಡಿಕೆ ಇಳಿಕೆಯಾಗಿದೆಯೆನ್ನಲಾಗಿದೆ. ಪ್ರಮುಖ ರಾಜ್ಯಗಳಲ್ಲಿ ಬಿಹಾರ, ಆಂಧ್ರಪ್ರದೇಶ, ಕರ್ನಾಟಕಗಳಲ್ಲಿ ಬೆಳೆಯ ಉತ್ಪಾದನೆ ಹಿಂದಿನ ವರ್ಷಕ್ಕಿಂತ ಹೆಚ್ಚಳವಿದ್ದು ಪ್ರಮುಖ ಬಳಕೆ ವಲಯವಾದ ಪೌಲ್ಟ್ರಿ ಸೆಕ್ಟರ್‌ನಿಂದ ಬೇಡಿಕೆ ಇಳಿಕೆಯಾಗುತ್ತಿದೆಯೆನ್ನಲಾಗಿದೆ. ಬಿಹಾರ್‌ನ ಗುಲ್‌ಬಾಗ್ ನಲ್ಲಿ ದರ ಇಳಿಕೆಯಾಗುತ್ತಿದೆಯೆನ್ನಲಾಗಿದೆ. ಒಟ್ಟು ಉತ್ಪಾದನೆ ಈ ವರ್ಷ 34.6 ಮಿಲಿಯನ್ ಟನ್‌ಗಳಾಗಬಹುದೆನ್ನಲಾಗಿದ್ದು, ಹಿಂದಿನ ವರ್ಷ 33.7 ಮಿಲಿಯನ್ ಟನ್ ಉತ್ಪಾದಿಸಲಾಗಿತ್ತು.